ವೈ. ಚರೂಷಿನ್



ತ್ಯೂಪ ಹಕ್ಕಿಗಳನ್ನು ಏಕೆ ಹಿಡಿಯುವುದಿಲ್ಲ





ತ್ಯೂಪಕ್ಕೆ ತ್ಯೂಪ ಅನ್ನುವ ಹೆಸರು ಹೇಗೆ ಬಂತು

ತ್ಯೂಪ ಒಂದು ಪುಟ್ಟ ಬೆಕ್ಕಿನ ಮರಿ. ಅದು ಆಶ್ಚರ್ಯವಾದುದನ್ನು ಅಥವಾ ವಿಚಿತ್ರವಾದುದನ್ನು ಏನನ್ನಾದರೂ ಕಂಡಾಗ ತನ್ನ ತುಟಿಗಳಿಂದ ವಿಲಕ್ಷಣವಾಗಿ ತ್ಯೂಪ್-ತ್ಯೂಪ್-ತ್ಯೂಪ್ ಅಂತ ಶಬ್ದ ಮಾಡುತ್ತಿತ್ತು.

ಹುಲ್ಲಿನ ಮಧ್ಯೆ ಗಾಳಿ ಸುಯ್ಯನೆ ಬೀಸಿದಾಗ, ಪುಟ್ಟ ಹಕ್ಕಿಯೊಂದು ಪಕ್ಕದಲ್ಲೇ ಪುರ್ರೆಂದು ಹಾರಿಹೋದಾಗ, ಅಥವಾ ಚಿಟ್ಟೆಯೊಂದು ರೆಕ್ಕೆಗಳನ್ನು ಪಟಪಟನೆ ಬಡಿದುಕೊಂಡು ಬಂದಾಗ, ತ್ಯೂಪ ತನ್ನ ಕಣ್ಣುಗಳನ್ನು ದೊಡ್ಡದಾಗಿ ಬಿಟ್ಟುಕೊಂಡು ಅದರ ಬಳಿಗೆ ಮೆಲ್ಲಗೆ ಹೋಗುತ್ತಿತ್ತು, ತ್ಯೂಪ್-ತ್ಯೂಪ್-ತ್ಯೂಪ್ ಅನ್ನುತ್ತಿತ್ತು – "ನಿನ್ನ ಹಿಡೀತೀನಿ, ನಿನ್ನ ಮೇಲೆ ಬೀಳ್ತೀನಿ ! ನಿನ್ನ ಜೊತೆ ಆಡ್ತೀನಿ" ಎಂದು ಹೇಳುತ್ತಿದೆಯೇನೋ ಅನ್ನುವಂತೆ.

ಹೀಗೆ ಅದು ಯಾವಾಗಲೂ ತ್ಯೂಪ್-ತ್ಯೂಪ್ ಅನ್ನುತ್ತಿದ್ದುದರಿಂದಲೇ ಅದಕ್ಕೆ ತ್ಯೂಪ ಅನ್ನುವ ಹೆಸರು ಬಂತು.

ಒಂದು ಸಾರಿ ತ್ಯೂಪಕ್ಕೆ ಮೃದುವಾದ ಶಿಳ್ಳೆ ಹಾಕುವ ಶಬ್ದ ಕೇಳಿ ಬಂತು.


ಸ್ವಲ್ಪ ದೂರದಲ್ಲೇ ಗೂಸ್‌ಬೆರಿ ಪೊದೆಯಲ್ಲಿ ಕೆಲವು ಸಣ್ಣ ಬೂದುಬಣ್ಣದ ಹಕ್ಕಿಗಳು ರೆಂಬೆಯಿಂದ ರೆಂಬೆಗೆ ಹಾರುತ್ತ ಹುಳುಹುಪ್ಪಟೆಗಳಿಗಾಗಿ ಹುಡುಕಾಡುತ್ತಿದ್ದವು.

ತ್ಯೂಪ ಅಲ್ಲಿಗೆ ಮೆಲ್ಲಗೆ ತೆವಳಿಕೊಂಡು ಹೋಗಿ ಕಾಣದ ಹಾಗೆ ಕುಳಿತುಕೊಂಡಿತು. ಉಸಿರಾಡದ ಹಾಗೆ ಕುಳಿತುಕೊಂಡಿತು. ಎಂದಿನಂತೆ ತ್ಯೂಪ್-ತ್ಯೂಪ್-ತ್ಯೂಪ್ ಅಂತ ಕೂಡ ಶಬ್ದ ಮಾಡಲಿಲ್ಲ. ಹಾಗೆ ಮಾಡಿದರೆ ಹಕ್ಕಿಗಳು ಹಾರಿ ಹೋಗಿಬಿಡುತ್ತವೇನೋ ಅಂತ ಹೆದರಿಕೆ ಅದಕ್ಕೆ. ಸ್ವಲ್ಪ ಹೊತ್ತು ಸುಮ್ಮನಿದ್ದು ಆಮೇಲೆ ಥಟಕ್ಕನೆ ಅವುಗಳ ಮೇಲೆ ಹಾರಿತು ! ಒಂದು ಹಕ್ಕಿಯನ್ನು ಇನ್ನೇನು ಹಿಡಿದೇಬಿಟ್ಟಿತ್ತು. ಆದರೆ ಅದು ಕೈಗೆ ಸಿಗಲೇ ಇಲ್ಲ.

ಹಕ್ಕಿಗಳನ್ನು ಹೇಗೆ ಹಿಡಿಯಬೇಕು ಅನ್ನುವುದು ತ್ಯೂಪಕ್ಕೆ ಇನ್ನೂ ಗೊತ್ತಿರಲಿಲ್ಲ. ಅದಿನ್ನೂ ತುಂಬ ಚಿಕ್ಕ ಮರಿಯಾಗಿತ್ತು.







ತಾಯಿ ಬೆಕ್ಕಿಗೆ ತ್ಯೂಪ ಇನ್ನೂ ಮಗುವೇ

ಒಂದು ದಿನ ತ್ಯೂಪಕ್ಕೆ ಚೆನ್ನಾಗಿ ಏಟೂ ಬಿತ್ತು. ಆದರ ಅಮ್ಮ ನೆಟ್ಟಿಯೇ ಅದಕ್ಕೆ ಏಟು ಕೊಟ್ಟದ್ದು. ಬೆಕ್ಕುಗಳು ಸಾಮಾನ್ಯವಾಗಿ ಮರಿಗಳನ್ನು ಹಾಕಿದಾಗ ತಮ್ಮ ದೊಡ್ಡ ಮರಿಗಳನ್ನು ದೂರ ಓಡಿಸಿಬಿಡುತ್ತವೆ. ನೆಟ್ಟಿಯೂ ಹಾಗೆಯೇ ತ್ಯೂಪನನ್ನು ಹೊಡೆದು ಓಡಿಸಿಬಿಟ್ಟಿತ್ತು. ಆದರೆ ನೆಟ್ಟಿಯ ಪುಟ್ಟ ಮರಿಗಳನ್ನು ಹುಟ್ಟಿದ ಕೂಡಲೇ ಯಾರಿಗೋ ಕೊಟ್ಟುಬಿಡಲಾಯಿತು. ಹಾಗಾಗಿ ಮಾರನೆಯ ದಿನ ನೆಟ್ಟಿ ಮಿಯಾವ್ ಎನ್ನುತ್ತ ಪರ್‌ಗುಟ್ಟುತ್ತ ತ್ಯೂಪದ ಬಳಿಗೇ ಬಂದಿತು. ಆದರೆ ತ್ಯೂಪಕ್ಕೆ ಹಿಂದಿನ ದಿನದ ಹೊಡೆತ ಇನ್ನೂ ಜ್ಞಾಪಕದಲ್ಲಿತ್ತು. ಆದ್ದರಿಂದ ಅದು ತಾಯಿಯ ಬಳಿಗೆ ಹೋಗಲಿಲ್ಲ. ಮತ್ತೆ ಹೊಡೆತ ತಿನ್ನಲು ಅದಕ್ಕೆ ಇಷ್ಟವಿರಲಿಲ್ಲ.

ನೆಟ್ಟಿ ಪರ್‌ಗುಟ್ಟಿತು. "ಬಾ, ಮಗೂ, ಬಾ ತುಂಟ, ಹಾಲು ಕುಡಿಸುತ್ತೇನೆ ಬಾ" ಅಂದಿತು.


ತ್ಯೂಪ ತಟ್ಟೆಯಿಂದ ಹಾಲು ಕುಡಿಯುವುದನ್ನು ಆಗಲೇ ಕಲಿತಿತ್ತು. ಆದರೂ ಅಮ್ಮನ ಹಾಲೇ ಅದಕ್ಕೆ ಹೆಚ್ಚು ರುಚಿಕರವಾಗಿತ್ತು.

ಕೊನೆಗೆ ತ್ಯೂಪ ಮೆಲ್ಲಗೆ ಅಮ್ಮನ ಬಳಿಗೆ ಹೋಯಿತು, ಹಾಲು ಕುಡಿಯಿತು. ಸ್ವಲ್ಪ ಹೊತ್ತಿನಲ್ಲೇ ಅದಕ್ಕೆ ಗಾಢ ನಿದ್ರೆ ಬಂದಿತು.

ಆಗ ವಿಚಿತ್ರ ಸಂಗತಿಗಳು ಜರುಗತೊಡಗಿದುದು ಅದರ ಅರಿವಿಗೆ ಬಂದಿತು.

ಎಷ್ಟೇ ಆಗಲಿ, ತ್ಯೂಪ ದೊಡ್ಡದಾಗಿ ಬೆಳೆದಿದ್ದಿತು. ಆದರೆ ತಾಯಿ ನೆಟ್ಟಿಗೆ ಅದಿನ್ನೂ ಪುಟ್ಟ ಮಗುವೇ. ಅದು ತ್ಯೂಪನನ್ನು ಆ ಕಡೆಯಿಂದ ಈ ಕಡೆಗೆ ಉರುಳಿಸುತ್ತ ಅದರ ಮೈಯನ್ನು ನೆಕ್ಕುತ್ತ ತೊಳೆಯತೊಡಗಿತು.

ತ್ಯೂಪ ಆಶ್ಚರ್ಯದಿಂದ ಎಚ್ಚರಗೊಂಡಿತು. ಹೀಗೆ ಮೈ ತೊಳೆಸಿಕೊಳ್ಳುವುದು ಅದಕ್ಕೆ ಇಷ್ಟವಿರಲಿಲ್ಲ. ತಾನೀಗ ದೊಡ್ಡವ, ಬೇಕಾದರೆ ತಾನೇ ಮೈ ತೊಳೆದುಕೊಳ್ಳಬಲ್ಲುದು. ತಾಯಿಯೇಕೆ ಹೀಗೆ ಮೈ ತೊಳೆಯಬೇಕು.





ತಪ್ಪಿಸಿಕೊಂಡು ಓಡಿಹೋಗೋಣವೇ ಅನಿಸಿತು ಅದಕ್ಕೆ. ಆದರೆ ನೆಟ್ಟಿ ಪರ್‌ಗುಟ್ಟಿತು: "ಸುಮ್ಮನೆ ಮಲಗು. ನೀನಿನ್ನೂ ಪುಟ್ಟ ಮಗು. ಓಡಿಹೋದರೆ ಕಳೆದು ಹೋಗಿ ಬಿಡುತ್ತೀಯ."

ನೆಟ್ಟಿ ಹೀಗೆ ಪರ್‌ಗುಟ್ಟುತ್ತಲೇ ಕೊನೆಗೆ ತಾನೇ ನಿದ್ದೆಹೋಯಿತು.

ಆಗ ತ್ಯೂಪ ಬುಟ್ಟಿಯಿಂದ ಮೆಲ್ಲಗೆ ಹೊರಬಂದಿತು. ಏನಾದರೂ ಆಟ ಆಡಬೇಕೂಂತ ಅದಕ್ಕೆ ಆಸೆ.

ಅದು ಚಿಟ್ಟೆಗಳನ್ನು ಹಿಡಿಯಲು, ಗುಬ್ಬಚ್ಚಿಯ ಮೇಲೆ ಹಾರಿ ಬೀಳಲು, ಹೋಯಿತು.

ನೆಟ್ಟಿಗೆ ಎಚ್ಚರವಾಯಿತು. ತನ್ನ ಮುದ್ದು ಪುಟ್ಟ ತ್ಯೂಪ ತನ್ನ ಬಳಿ ಇಲ್ಲದುದನ್ನು ಕಂಡು ಅದಕ್ಕೆ ದಿಗಿಲಾಯಿತು. ಅಯ್ಯೋ, ಕಳೆದು ಹೋಯಿತೆ!

ಅದು ಅಂಗಳಕ್ಕೆ ಓಡಿಹೋಗಿ "ತ್ರೂಪ, ತ್ರೂಪ" ಎಂದು ಕರೆಯಿತು.

ತ್ರೂಪ ಮನೆಯ ಮೇಲ್ಛಾವಣಿಯ ಮೇಲಿತ್ತು. ಗುಬ್ಬಚ್ಚಿಗಳನ್ನು ಹಿಡಿಯಲು ಅವುಗಳ ಹಿಂದೆಯೇ ಓಡಾಡುತ್ತಿತ್ತು.

ನೆಟ್ಟಿ ಅದರ ಬಳಿಗೆ ಓಡಿಹೋಯಿತು.

"ಹುಷಾರಾಗಿರು ! ಬಿದ್ದು ಬಿಡುತ್ತೀಯ !" ಎಂದದು ಕೂಗಿ ಹೇಳಿತು.

ಆದರೆ ತ್ರೂಪ ತಾಯಿಯ ಮಾತನ್ನು ಕೇಳಿಸಿಕೊಳ್ಳಲೇ ಇಲ್ಲ. ನೆಟ್ಟಿಗೆ ಕೋಪ ಬಂತು. ತ್ರೂಪನ ಕತ್ತಿನ ಮೇಲ್ಭಾಗವನ್ನು ಕಚ್ಚಿಹಿಡಿದು ಅದನ್ನು ಕೆಳಗೆ ಕರೆದೊಯ್ದಿತು, ಅದಿನ್ನೂ ಪುಟ್ಟ ಕೂಸೇನೋ ಎಂಬಂತೆ. ತ್ರೂಪ ಕಾಲುಗಳನ್ನು ಬಡಿಯುತ್ತ ಚೀರಾಡಿತು. ಅದಕ್ಕೆ ಮೇಲ್ಛಾವಣಿಯ ಮೇಲೆಯೇ ಆಡಲು ಇಷ್ಟ.

ನೆಟ್ಟಿ ಅದನ್ನು ಬುಟ್ಟಿಯೊಳಕ್ಕೆ ತಂದು ಇರಿಸಿದ ಮೇಲೆ ಮತ್ತೆ ಪರ್‌ಗುಟ್ಟುತ್ತ ಅದರ ಮೈ ನೆಕ್ಕಿ ತೊಳೆಯ ತೊಡಗಿತು. ತ್ರೂಪ ಆಗಲೇ ದೊಡ್ಡ ಬೆಕ್ಕಿನ ಮರಿಯಾಗಿ ಬೆಳೆದಿದೆ, ಅದಕ್ಕೆ ಈ ರೀತಿಯ ಆರೈಕೆ ಬೇಕಿಲ್ಲ, ಎಂಬುದನ್ನು ನೆಟ್ಟಿ ಅರ್ಥಮಾಡಿಕೊಂಡಿರಲಿಲ್ಲ.





ತ್ಯೂಪ ಹಕ್ಕಿಗಳನ್ನು ಏಕೆ ಹಿಡಿಯುವುದಿಲ್ಲ

ಒಂದು ದಿನ ತ್ಯೂಪ ಮರದ ಕೊಂಬೆಯೊಂದರ ಮೇಲೆ ಒಂದು ಗುಬ್ಬಚ್ಚಿ ಏನೋ ಒಂದು ಹಾಡು ಹಾಡುತ್ತ ಕುಳಿತಿದ್ದುದನ್ನು ಕಂಡಿತು. "ಚಿಲಿಪಿಲಿ, ಚಿಲಿಪಿಲಿ!" ಅಂತ ಹಾಡುತ್ತಿತ್ತು ಅದು.

ತ್ಯೂಪ್-ತ್ಯೂಪ್-ತ್ಯೂಪ್! "ನಿನ್ನನ್ನು ಹಿಡೀತೀನಿ! ನಿನ್ನ ಮೇಲೆ ಬೀಳ್ತೀನಿ! ನಿನ್ನ ಜೊತೆ ಆಡ್ತೀನಿ!" ಎಂದು ಹೇಳಿಕೊಂಡು ತ್ಯೂಪ ಅದರ ಹತ್ತಿರಕ್ಕೆ ಸದ್ದಾಗದಂತೆ ಹೋಯಿತು.

ಆದರೆ ಗುಬ್ಬಚ್ಚಿ ಅದನ್ನು ಕಂಡುಕೊಂಡಿತು. ಅದು ಇನ್ನೂ ಹೆಚ್ಚು ಗಟ್ಟಿಯಾಗಿ ಚಿಲಿಪಿಲಿಗುಟ್ಟತೊಡಗಿತು. "ಇಲ್ಲಿ ನೋಡಿ, ಇಲ್ಲೊಂದು ಬೆಕ್ಕು ಬಂದಿದೆ! ನೋಡಿ, ಅದು ಅಲ್ಲಿ ಅಡಗಿಕೊಂಡಿದೆ! ಅಲ್ಲಿ ನೋಡಿ, ಅಲ್ಲಿ!" ಎಂದದು ಕೂಗಿತು. ಆಗ ಇದ್ದಕ್ಕಿದ್ದಂತೆ ಎಲ್ಲೆಲ್ಲಿಂದಲೋ ತುಂಬ ಗುಬ್ಬಚ್ಚಿಗಳು ಹಾರಿಬಂದವು. ಅವು ಪೊದೆಗಳ ಮೇಲೂ ಕೊಂಬೆಗಳ ಮೇಲೂ ಕುಳಿತುಕೊಂಡವು. ಕೆಲವು ತ್ಯೂಪನ ಮುಂದೆಯೇ ಬಂದು ಕುಳಿತವು.

ಅವೆಲ್ಲ ಒಟ್ಟಿಗೇ ಕಿರುಚತೊಡಗಿದವು: "ಚಿಲಿಪಿಲಿ, ಚಿಲಿಪಿಲಿ! ಚಿಲಿಪಿಲಿ, ಚಿಲಿಪಿಲಿ!"

ಅವು ಮಾಡುತ್ತಿದ್ದ ಸದ್ದು ಕಿವುಡಾಗಿಸುವಂತಿತ್ತು.

ತ್ಯೂಪಕ್ಕೆ ಹೆದರಿಕೆಯಾಯಿತು. ಅದೆಂದೂ ಅಷ್ಟು ಭಾರಿ ಸದ್ದು ಗದ್ದಲವನ್ನು ಕೇಳಿರಲಿಲ್ಲ. ಎಷ್ಟು ಬೇಗ ಸಾಧ್ಯವೋ ಅಷ್ಟೂ ಬೇಗ ಅದು ಅಲ್ಲಿಂದ ಓಡಿಹೋಯಿತು.

ಗುಬ್ಬಚ್ಚಿಗಳು ತ್ಯೂಪನನ್ನು ಬಯ್ಯುತ್ತಲೇ ಇದ್ದವು. ಆಮೇಲೆ ಅವು ತಾವೆಷ್ಟು ಧೈರ್ಯಶಾಲಿಗಳು, ಹೇಗೆ ಬೆಕ್ಕನ್ನೂ ಓಡಿಸಿಬಿಟ್ಟವು, ಎಂದು ತಮ್ಮತಮ್ಮೊಳಗೇ ಹೇಳಿಕೊಂಡವು.





ಈಗ ತ್ಯೂಪ ಬೇರೆ ಯಾರನ್ನು ಹಿಡಿಯಬೇಕು? ಅದರ ಕೈಗೆ ಸಿಕ್ಕಿಬೀಳಲು ಯಾರಿಗೂ ಇಷ್ಟವಿರಲಿಲ್ಲ. ಆದರೂ ಇರಲಿ ನೋಡೋಣವೆಂದು ಅದು ಮರವೊಂದನ್ನು ಹತ್ತಿ ಕೊಂಬೆಗಳ ಮಧ್ಯೆ ಅಡಗಿ ಕುಳಿತುಕೊಂಡಿತು.

ಆ ಕಡೆ ಈ ಕಡೆ ನೋಡಿತು. ಹಕ್ಕಿಗಳು ಯಾವುವೂ ಕಾಣಲಿಲ್ಲ. ಆದರೆ ಹಕ್ಕಿಗಳಿಗೆ ಮಾತ್ರ ತ್ಯೂಪ ಹೊಂಚುಹಾಕುತ್ತಿದ್ದುದು ಕಂಡುಬಂದಿತು. ಅವು ಅದರ ಚಲನೆಯನ್ನೇ ಗಮನಿಸುತ್ತಿದ್ದವು.

ಎಷ್ಟೋ ಹೊತ್ತಾದ ಮೇಲೆ ತ್ಯೂಪ ಹಕ್ಕಿಗಳನ್ನು ಕಂಡಿತು. ವಿಚಿತ್ರವಾಗಿ ಕಾಣುತ್ತಿದ್ದ ಆ ಹಕ್ಕಿಗಳು ತ್ಯೂಪನನ್ನೇ ದಿಟ್ಟಿಸಿ ನೋಡುತ್ತಿದ್ದವು. ಅವೇನೂ ಪುಟ್ಟ ಬೂದುಬಣ್ಣದ ಹಕ್ಕಿಗಳಾಗಿರಲಿಲ್ಲ, ಅಥವಾ ಆ ಬಯ್ಗುಳದ ಗುಬ್ಬಚ್ಚಿಗಳೂ ಆಗಿರಲಿಲ್ಲ. ಅವು ಸುಮಾರು ತ್ಯೂಪನಷ್ಟೇ ದೊಡ್ಡದಾಗಿದ್ದವು, ಕಪ್ಪಾಗಿದ್ದವು, ಗೂಡು ಕಟ್ಟಿಕೊಳ್ಳಲು ಸರಿಯಾದ ಮರಕ್ಕಾಗಿ ಹುಡುಕಾಡುತ್ತಿದ್ದವು.

ತ್ಯೂಪನೂ ಅವುಗಳಿಗೆ ವಿಚಿತ್ರವಾಗಿ ಕಂಡುಬಂದಿತು.

ತ್ಯೂಪಕ್ಕೆ ಸಂತೋಷವಾಯಿತು. ತ್ಯೂಪ್-ತ್ಯೂಪ್-ತ್ಯೂಪ್! "ಇವು ಏನಾಗಿರಬಹುದು?" ತ್ಯೂಪ್-ತ್ಯೂಪ್-ತ್ಯೂಪ್! "ನಾನು ನಿಮ್ಮನ್ನು ಹಿಡೀತೀನಿ! ನಿಮ್ಮ ಮೇಲೆ ಬೀಳ್ತೀನಿ! ನಿಮ್ಮ ಜೊತೆ ಆಡ್ತೀನಿ!" ಎಂದಿತು.

ಆದರೆ ಯಾವುದನ್ನು ಮೊದಲು ಹಿಡಿಯಬೇಕೆಂದು ತ್ಯೂಪಕ್ಕೆ ಗೊತ್ತಾಗಲಿಲ್ಲ.

ಒಂದು ದೊಡ್ಡ ಕಪ್ಪು ಹಕ್ಕಿ ಅದರ ಹಿಂದೆಯೇ ಕುಳಿತಿತ್ತು. ಇನ್ನೊಂದು ಮುಂದೆ ಕುಳಿತಿತ್ತು. ತುಂಬ ಹತ್ತಿರ ಕುಳಿತಿತ್ತು.

ತ್ಯೂಪ ಆ ಕಡೆ ಈ ಕಡೆ ನೋಡಿತು. ಮೊದಲು ಒಂದನ್ನು ನೋಡಿತು. ಆಮೇಲೆ ಇನ್ನೊಂದನ್ನು. ಹಿಂದಿದ್ದುದನ್ನು ನೋಡುತ್ತಿದ್ದಾಗ ಮುಂದಿದ್ದುದು ತ್ಯೂಪನನ್ನು ಕೊಕ್ಕಿನಿಂದ ಕುಕ್ಕಿತು. ತ್ಯೂಪಕ್ಕೆ ನೋವಾಯಿತು. ಯಾರು ತನ್ನನ್ನು ಕುಕ್ಕಿ ನೋವುಮಾಡಿದುದು ಎಂಬುದು ಅದಕ್ಕೆ ತಿಳಿಯಲಿಲ್ಲ.

ಅದು ಕೂಡಲೇ ಮರದಿಂದ ಕೆಳಕ್ಕೆ ಹಾರಿ ಪೊದೆಗಳೊಳಕ್ಕೆ ಓಡಿ ಹೋಯಿತು.

ಈಗ ತ್ಯೂಪ ಯಾವುದೇ ಹಕ್ಕಿಯನ್ನು ಕಂಡಾಗಲೂ ಅದರ ಕಡೆಗೆ ಗಮನವನ್ನೇ ನೀಡುವುದಿಲ್ಲ. ಅದು ಇನ್ನೆಂದಿಗೂ ಹಕ್ಕಿಗಳನ್ನು ಹಿಡಿಯ ಹೋಗುತ್ತಿಲ್ಲ.



ಒಳಗೇನಿದೆ












ಚಿತ್ರಗಳು ಲೇಖಕರಿಂದಲೇ
ಅನುವಾದ: ಗೋಪಾಲಕೃಷ್ಣರಾವ್

Е. Чарушин
ПОЧЕМУ ТЮПА НЕ ЛОВИТ ПТИЦ
на языке каннада



ಪ್ರಗತಿ ಪ್ರಕಾಶನ
ಮಾಸ್ಕೋ

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

Ч $\frac{70802\text{-}116}{016(01)\text{-}80}$ б. о.

4803010102